

ಚಿತ್ರಗಳನ್ನೆಲ್ಲಾ ಅದುಮಿ ಕ್ಯಾಮೆರಾ ಪುಟ್ಟಿಯಲ್ಲಿ ತುಂಬಿಕೊಂಡು ಬರಬೇಕು ಎಂಬ ಉಮೇದಿನಿಂದ ನಾವು ಹೊರಟಿದ್ದೇವೆ.

ಹನ್ನೆರಡು ಗಂಟೆಗೆ ಮಲಾಯ್ ಎಂಬ ಸಣ್ಣ ಹಳ್ಳಿ ತಲುಪಿದೆವು. ನಮ್ಮ ಫೋಟೊ ಬೇಟೆಯ ಕಿಯೋಲಾಡಿಯೊ ಸಂರಕ್ಷಿತ ಅರಣ್ಯ ಎದುರಿಗೆ ಕಾಣುತ್ತಿತ್ತು. ಇಲ್ಲಿನ ಐಬಿಸ್ ಹೌಸ್ ಎಂಬ ಮನೆಯಲ್ಲಿ ನಾವು ಉಳಿಯುವವರಿದ್ದೆವು. ಇದು ರತನ್ ಸಿಂಗ್ ಎಂಬವರ ಮನೆ. ರತನ್ ಸಿಂಗ್ ಪಕ್ಷಿ ತಜ್ಞ ಸಲೀಂ ಅಲಿ ಅವರ ಜೊತೆ ಕೆಲಸ ಮಾಡಿದ ಅನುಭವಿ. ಅಪಾರ ಪಕ್ಷಿ ಜ್ಞಾನವಿರುವ ಮನುಷ್ಯ. ಈಗಾಗಲೇ ಈ ಭೂಮಿಯಿಂದ ನಾಮಾವಶೇಷವಾಗಿರುವ ಸೈಬಿರಿಯನ್ ಕ್ರೈನ್, ಪಿಂಕ್ ಹೆಡೆಡ್ ಡಕ್, ಮೌಂಟೆನ್ ಕೋಯಲ್, ಅಪ್ಪೆಲ್ ಎಂಬ ಸುಂದರ ಹಕ್ಕಿಗಳನ್ನು ಕಣ್ಣಾರೆ ಕಂಡವರು. ನಾವು ಕಾರಿನಿಂದ ಇಳಿದಾಗ ಅಲ್ಲೇ ಇದ್ದ ಸಣ್ಣ ಗೂಡಂಗಡಿ ಮುಂದೆ ಹುಕ್ಕಾ ಸೇದುತ್ತಾ ಕೂತಿದ್ದರು. ಈಗವರಿಗೆ ವಯಸ್ಸಾಗಿದೆ. ಅವರಿಗೆ ಮೊದಲು ನಮಸ್ಕರಿಸಿ ನಮ್ಮ ಪರಿಚಯ ಹೇಳಿಕೊಂಡೆವು.

ನಮಗಾಗಿ ಕಾಯುತ್ತಿದ್ದ ರತನ್ ಸಿಂಗ್ ಮಗ ಲೋಕೇಶ್ ಹೂವಿನ ಹಾರ ಹಾಕಿ ನಮ್ಮನ್ನು ಗಂಡಿನ ಕಡೆಯವರಂತೆ ಸ್ವಾಗತಿಸಿದ. ಲೋಕೇಶ್ ದಟ್ಟ ಮೀಸೆಯ ಗಟ್ಟಿ ಯುವಕ. ಈತನೇ ನಮ್ಮ ಮುಂದಿನ ಪಕ್ಷಿ ಶಿಕಾರಿಯ ಮಾರ್ಗದರ್ಶಿ. ರತನ್ ಸಿಂಗ್ ಕುಟುಂಬದವರು ನಮಗಾಗಿ ದೇಸಿ ಸೌದೆ ಒಲೆಯಲ್ಲಿ ಸಜ್ಜೆ ರೊಟ್ಟಿಗಳನ್ನು ಸುಡುತ್ತಿದ್ದರು. ಅವರನ್ನೂ ಮಾತಾಡಿಸಿದೆವು. ಮುಸುಕು ಹೊದ್ದ ಹೆಣ್ಣುಮಕ್ಕಳು ನಮ್ಮಂತೆ ಬರುವ ಯಾತ್ರಿಕರಿಗೆ ಬೇಯಿಸಿ ಹಾಕಿ ಸುಸ್ತಾದವರು. ಇವರನ್ನು ಬಂದವರು ಮಾತಾಡಿಸುವುದು ಕಡಿಮೆ. ನಮ್ಮ ಪ್ರೀತಿಗೆ ನಗುನಗುತ್ತಾ ಕೃತಜ್ಞತೆ ಸೂಸಿದರು. ನಮ್ಮದೇ ಹಳ್ಳಿ ಮನೆಗೆ ಬಂದ ವಾತಾವರಣ. ಮಿಂದು ಬಂದು ಸುಟ್ಟ ಬದನೆಕಾಯಿ ಚಟ್ನಿ, ಹುರಿದ ಬೆಂಡೆ ಪಲ್ಯ, ಸಾಕು ಎಮ್ಮೆಯ ಗಟ್ಟಿ ಮೊಸರು ಕತ್ತರಿಸಿ ಬಾರಿಸಿದೆವು. ನಂತರ ಸೂಟ್ಕೇಸ್‌ನಲ್ಲಿ ಸೊಂಟ ಮುರಿದು ಅಡಗಿಸಿಟ್ಟ ಟ್ರೈಪಾಡ್, ಕತ್ತು ಮುರಿದಿಟ್ಟ ಕ್ಯಾಮೆರಾ ಮತ್ತು ಲೆನ್ಸ್‌ಗಳನ್ನು ಅಳವಡಿಸಿಕೊಂಡು ಯುದ್ಧ ಸೈನಿಕರಂತೆ ಸಿದ್ಧವಾದೆವು.

ಇನ್ನೂ ನಮ್ಮನ್ನು ಸಾಗಿಸುವ ವಾಹನ ಬಂದಿರಲಿಲ್ಲ. ಮರದ ನೆರಳಲ್ಲಿ ಹಗ್ಗದ ಮಂಚದ ಮೇಲೆ ಉಂಡು ಕೂತಿದ್ದ ರತನ್ ಸಿಂಗ್ ಅವರ ಜೊತೆ ಮಾತಿಗೆ ಹೋಗಿ ಕೂತೆ. ಉಲ್ಲಾಸಗೊಂಡು ನೆನಪಿಗೆ ಜಾರಿದರು. ಹಳೆಯ